ನಿರಾಶೆಯನ್ನು ಅರಿತು ಪಕ್ವವಾಗಿ ಹೇಳಿದ್ದೂ ಈಗ ನನ್ನ ನೆನಪಿಗೆ ಬರುತ್ತಿದೆ. 'ನೆಂಟಸ್ತಿಕೆ ನೆಂಟಸ್ತಿಕೆಯಾಗೇ ಇರಬೇಕು. ಅದು ನಮ್ಮನ್ನು ಅವರ ಮನೆಯ ಆಳಾಗಿಸಬಾರದು.' ಇದು ಒಂದು ಅಳತೆಗೋಲು. ಈ ರೀತಿಯಾಗಿ, ಒಂದು ಫಾರ್ಮುಲಾ ಹಾಕಿ ಬದುಕಿನ ಸಮಸ್ಯೆಗಳನ್ನು ಬಗೆಹರಿಸುವ ಸೂತ್ರಗಳನ್ನು ಹೇಳಿ ಹೋಗುವುದು ಅಮ್ಮನ ಶೈಲಿ. 'ಪ್ರಪಂಚದಲ್ಲಿ ಅರಿತುಕೊಳ್ಳಲಾಗದ್ದು ಎಂಬುದು ಏನೂ ಇಲ್ಲ. ಪ್ರಯತ್ನಪಟ್ಟರೆ ತಿಳಿದುಕೊಳ್ಳಬಹುದು' ಎಂಬುದು ಅಮ್ಮನ ಪ್ರಮುಖವಾದ ಸೂತ್ರ. ಅಮ್ಮನ ಬದುಕನ್ನು ಬಲಗೊಳಿಸಿರುವುದೇ ಇಂತಹ ಸೂತ್ರಗಳೆಂಬುದು ನನ್ನ ದೃಢವಾದ ನಂಬಿಕೆ. ಅದೇ ಪೂರ್ತಿ ಬೇರೆಯ ವಾತಾವರಣದಲ್ಲಿ ಬದುಕುತ್ತಿರುವ ಅಮ್ಮನನ್ನು ಕಾಪಾಡುತ್ತಿರುವುದು. ಜವಳಿ ಅಂಗಡಿ ಇರುವ ಕುಟುಂಬದಲ್ಲಿ ಹುಟ್ಟಿ ಬೆಳೆದ ಅಮ್ಮ, ಕೃಷಿ ಕೆಲಸ ಮಾಡುವ ಈ ದೊಡ್ಡ ಕುಟುಂಬಕ್ಕೆ ಬಂದು ಎಲ್ಲವನ್ನೂ ಕಲಿತುಕೊಂಡದ್ದು. 'ನಿನ್ನೆ ಉಂಡ ಅನ್ನ ಇಂದಿನ ಹಸಿವಿಗೆ ಉಪಯೋಗವಿಲ್ಲ. ಈ ದಿನಕ್ಕೇನೆಂದು ಕಂಡುಕೊಂಡರೆ ಮಾತ್ರ ಜೀವಿಸಲು ಸಾಧ್ಯ' ಎಂದು ಸಹಜವಾಗಿ ಹೇಳಿದರೂ ಅದನ್ನು ತನ್ನ ಅನುಭವದಿಂದ ಕಂಡುಕೊಂಡ ಗುಣವಾಗಿ ಅಮ್ಮನ ಬಳಿ ಉಂಟು.

'ನಿಮ್ಮಮ್ಮ ಮಾತ್ರ ನಾಲ್ಕಕ್ಷರ ಕಲಿತಿದ್ದರೆ, ಅವಳಿರಬೇಕಾದ ಜಾಗವೇ ಬೇರೆ' ಎಂದು ಅಮ್ಮ ಇಲ್ಲದಾಗ ಅಪ್ಪ ಹೇಳಿರುವುದನ್ನು ಕೇಳಿರುವೆನು. ನಾನು ಅಮ್ಮನ ಬಳಿ ಕೇಳಿರುವೆನು. 'ಯಾಕಮ್ಮ, ನೀನು ಓದಲಿಕ್ಕೆ ಹೋಗಲಿಲ್ಲ?' ಅನೇಕ ಸಲ ಉತ್ತರವಾಗಿ ಒಂದು ದೀರ್ಘ ನಿಟ್ಟುಸಿರು ಹೊರ ಬೀಳುವುದು. ಒಮ್ಮೆ 'ಹಣೆಬರಹ' ಎಂದು ಮತ್ತೊಮ್ಮೆ 'ನಾನು ಪಡೆದು ಬಂದದ್ದೇ ಇಷ್ಟು' ಎಂದೂ ಹೇಳಿರುವಳು. 'ಎಲ್ಲರಂತೆ ನಾನೂ ನಾಕಕ್ಷರ ಕಲಿತಿದ್ದರೇ' ಎಂದು ಯಾವಾಗಲಾದರೂ ಗೊಣಗಾಡುವುದೂ ಉಂಟು. ಆದರೆ ಅಮ್ಮನಿಗೆ ಲೆಕ್ಕಾಚಾರಗಳು ಚೆನ್ನಾಗಿ ಬರುವುದು. ಅವಳು ವ್ಯವಸ್ಥಿತವಾಗಿ ಕೆಲಸ ನಿರ್ವಹಿಸುವ ಚಾತುರ್ಯಕ್ಕೆ ಎಂ.ಬಿ.ಎ. ಓದಿದವರೂ ಸೋತುಹೋಗುವರು.

ಅಂಗಡಿಯ ಪೊಟ್ಟಣಗಳಲ್ಲಿ ದೇವರ ಚಿತ್ರವಿರುವ ಹಾಳೆಗಳನ್ನು ಜೋಪಾನವಾಗಿಟ್ಟಿರುವಳು. ಅದರಲ್ಲಿ ದಪ್ಪ ಅಕ್ಷರಗಳಲ್ಲಿರುವ ಶೀರ್ಷಿಕೆಗಳನ್ನು, ಉಚ್ಚಾರ ಮಾಡಿ ನಾನು ಬಿಡುವಿರುವಾಗ ತೋರಿಸಿ, 'ಇದು ಸರಿಯಾಗಿದೆಯೇ?' ಎಂದು ಕೇಳುವಳು. ಬಹಳ ಸಲ ಅವು ಸರಿಯಾಗಿರುವುದು. ಕೆಲವೊಮ್ಮೆ ಹ್ರಸ್ವ, ದೀರ್ಘ ತಪ್ಪುವುದು. ಅಥವಾ ಹ, ಜ ಅಂತಹ ಉತ್ತರದ ಅಕ್ಷರಗಳಾಗಿರುವುದು. ಆದರೆ, ಶೆಂಬಾಯಿಅಪ್ಪತ್ತಾಗೆ ಚೆನ್ನಾಗಿ ಓದಲು ಬರುವುದು. ಊರಿಗೆ ಹಿಂತಿರುಗಿ ಬರುವಾಗಲೆಲ್ಲಾ ವಿವಿಧ ಪತ್ರಿಕೆಗಳನ್ನು ತರುವರು. ಬಣ್ಣದ ಚಿತ್ರಗಳುಳ್ಳ 'ಆನಂದವಿಕಟನ್', 'ಕಲ್ಕಿ' ಎಂಬೆಲ್ಲ ಶೀರ್ಷಿಕೆಗಳುಳ್ಳ ಆ ಪತ್ರಿಕೆಗಳ ಜೊತೆಗೆ ಸಿನಿಮಾಕ್ಕೆ ಸಂಬಂಧಪಟ್ಟ ಪತ್ರಿಕೆಗಳೂ ಇರುವುದು. ಅವುಗಳನ್ನೆಲ್ಲ ನಾನು ಮುಟ್ಟಬಾರದು ಎಂದು ಕಟ್ಟಪ್ಪಣೆ ಇರುವುದು ಶೆಂಬಾಯಿಅಪ್ಪತ್ತಾಗೆ ತಿಳಿಯದು. ಆದರೂ ನನಗೆ ಅಮ್ಮ ಒಂದು ರಹಸ್ಯವಾದ ಆಜ್ಞೆ ಹೊರಡಿಸಿದ್ದೂ ಸಹ ಈಗ ಜ್ಞಾಪಕಕ್ಕೆ ಬರುತ್ತಿದೆ. ಅದನ್ನು ಹೇಳುವಾಗ ಅಮ್ಮನ ಮುಖ ಒಂದು ರೀತಿಯಾಗಿತ್ತು.

ಪತ್ರಿಕೆಗಳನ್ನು ಓದುವಂತೆ, ಸಿನಿಮಾಗಳನ್ನು ನೋಡುವುದು ಅಪ್ಪತ್ತಾಗೆ ಬಹಳ ಹಿಡಿಸುವುದೇನೋ. ಊರಿಗೆ ಹೋದಾಗ ಸಿನಿಮಾ ನೋಡುವುದು, ಉಳಿದ ಸಮಯಗಳಲ್ಲಿ ಪತ್ರಿಕೆಗಳನ್ನು ಓದುವುದು ಅವರಿಗೆ ಸಹಜ ಹವ್ಯಾಸವಾಗಿತ್ತು. ಒಂಟಿಯಾಗಿರುವಾಗ ಪುಸ್ತಕಗಳಿಗಿಂತ ಒಳ್ಳೆಯ ಜೊತೆ ಏನಿರಲು ಸಾಧ್ಯ? ಆಗೆಲ್ಲ ಟೀವಿ ಇರಲಿಲ್ಲ. ಆ ಕಾಲದ ದೊಡ್ಡ ರೇಡಿಯೋವನ್ನು ಅವರ ಮನೆಯ ಹಾಲಿನಲ್ಲಿ ನೋಡಿರುವೆನು. ಶೆಂಬಾಯಿಅಪ್ಪಾತ್ತಾಗೆಂದು